ನಕ್ಕ. ನಂತರ ಸಮೀಪದಲ್ಲಿಯೇ ಇದ್ದ ಪೆನ್ನನ್ನು ತೆಗೆದುಕೊಂಡು ಕಂಪಿಸುವ ಕೈಯಿಂದ ಆ ಭಾವಚಿತ್ರದ ಮೇಲೆ ಬರೆದ

'ನನ್ನ ಪ್ರೀತಿಯ ಸೊಸೆಗೆ'

ಹೀಗೆ ಬರೆದು ಆ ಭಾವಚಿತ್ರವನ್ನು ಸರಸ್ವತಿಯ ಕೈಯಲ್ಲಿಟ್ಟ.

'ಅಪ್ಪಾ...' ಸರಸ್ವತಿ ರೋದಿಸುತ್ತಲೇ ಇದ್ದಳು. ಅವಳು ಒಂದು ಶಬ್ದವನ್ನೂ ಹೇಳದಾದಳು.

ಹರಿಲಾಲ ಮತ್ತೊಮ್ಮೆ ತನ್ನ ಕಣ್ಣೀರನ್ನು ಒರೆಸಿಕೊಂಡ. ಸರಸ್ವತಿಯ ತಲೆಯನ್ನು ನೇವರಿಸಿ, ಬೆನ್ನು ತಿರುಗಿಸಿ ಹೊರಗೆ ಹೊರಟು ಹೋದ.

ಹರಿಲಾಲ ಮತ್ತೆ ಮರಳಿ ಬರಲಿಲ್ಲ.

## ಮೂವತ್ತೊಂಬತ್ತು

31 ಜನವರಿ, 1948

ಎರಡು ಸಾವಿರ ವರ್ಷಗಳ ಹಿಂದೆ ಏಸುಕ್ರಿಸ್ತರನ್ನು ಮೊಳೆಗಳಿಂದ ಹೊಡೆದು ಶಿಲುಬೆಗೇರಿಸಲಾಗಿತ್ತು; ಆಗ ಇಡೀ ಬ್ರಹ್ಮಾಂಡದಲ್ಲಿ ವ್ಯಾಪಿಸಿದ ಅಮೂರ್ತ ಮಾನವತೆ ಗಾಬರಿಗೊಂಡಿತ್ತು. ಅದಕ್ಕೂ ಮಿಗಿಲಾದ ವ್ಯಾಕುಲತೆಯನ್ನು ಇಂದು ಮತ್ತೊಮ್ಮೆ ಮಾನವತೆಯು ಮನಗಾಣುತ್ತಿತ್ತು. ಬ್ರಹ್ಮಾಂಡದ ಅಮೂರ್ತ ಮಾನವತೆಯಷ್ಟೇ ಅಲ್ಲ, ನಿನ್ನೆ ಸಂಜೆ ಪೃಥ್ವಿಯಲ್ಲಿ ಸಂಚರಿಸುತ್ತಿದ್ದ ಕೋಟ್ಯಂತರ ಜನ, ಶಾಪಗ್ರಸ್ತ ನಗರವೊಂದರ ಮರದ ಪ್ರತಿಮೆಗಳಾಗಿ ಪರಿವರ್ತನೆ ಹೊಂದಿದ್ದರು. ಕೋಟ್ಯಂತರ ಜನ ರಾತ್ರೆಯೆಲ್ಲಾ ಕಣ್‌ರೆಪ್ಪೆಗಳನ್ನೂ ಮುಚ್ಚದೆ ಜಾಗರಣೆಯನ್ನು ಮಾಡಿದ್ದರು. ಇಂದು ಲಕ್ಷಾಂತರ ಅಡುಗೆಯ ಮನೆಗಳಲ್ಲಿ ಒಲೆಯನ್ನು ಹೊತ್ತಿಸಲಿಲ್ಲ. ಇಡೀ ದೇಶ ಉಸಿರಾಡುತ್ತಿದ್ದರಿಂದ ಮಾತ್ರ, ಅದು ಜೀವಂತವಾಗಿದೆ ಎಂದು ತಿಳಿದು ಬರುತ್ತಿತ್ತು, ಇಲ್ಲದಿದ್ದಲ್ಲಿ ಎಲ್ಲರೂ ಪ್ರಾಣವನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದರು. ಕಳೆದ ಸಂಜೆ, ತನ್ನ ಪ್ರಜ್ಞೆಯನ್ನು ಕಳೆದುಕೊಂಡ ಕೊಲೆಗಡುಕನೊಬ್ಬ ಬಾಪೂ ಅವರ ಮೇಲೆ ಗುಂಡುಗಳನ್ನು ಹಾರಿಸಿದ್ದ. ಬಾಪೂ ಅವರು ಕೈಮುಗಿದು, 'ಹೇ ರಾಮ್' ಎಂದು ಹೇಳಿ ಈ ನಶ್ವರ ದೇಹವನ್ನು ತ್ಯಜಿಸಿದ್ದರು. ಇಳಿಯುವ ಸಂಜೆಯಲ್ಲಿ ಈ ಘಟನೆಯ ಸುದ್ದಿ ದೇಶದ ಮೂಲೆಮೂಲೆಗಳಿಗೆ ತಲುಪಿತ್ತು. ಇಡೀ ದೇಶ ರೋದಿಸುತ್ತಿತ್ತು. ಆಘಾತದ ತತ್‌ಕ್ಷಣವೇ ಕಂಪಿಸುವ, ಆತ್ಮೀಯತೆಯ ಧ್ವನಿಯನ್ನು ಜನ ರೇಡಿಯೋದಲ್ಲಿ ಕೇಳಿದರು. ಆ ಧ್ವನಿ ಜವಾಹರಲಾಲ್ ನೆಹರೂ ಅವರದಾಗಿತ್ತು. ನೆಹರೂ ಅವರು ಸ್ವಗತ ಭಾಷಣ ಮಾಡುತ್ತಿರುವಂತೆ ಕಂಡಿತು.

'ದೇಶದ ಬಂಧುಗಳೇ, ನಮ್ಮ ಜೀವನದಲ್ಲಿನ ದೀಪವೊಂದು ಆರಿದೆ, ಈಗ ಎಲ್ಲೆಲ್ಲೂ ಕತ್ತಲೆ ಕವಿದಿದೆ.'

ಈ ಧ್ವನಿಯೊಂದಿಗೆ ಮತ್ತೊಂದು ಸೂಕ್ಷ್ಮ, ಗಟ್ಟಿ ಧ್ವನಿ ಕೇಳಿ ಬಂತು.

'ಇಲ್ಲ, ಯಾರೂ ಧೈರ್ಯವನ್ನು ಕಳೆದುಕೊಳ್ಳಲಾರರು. ಯಾರೂ ಕೋಪಿಸಿಕೊಳ್ಳಲಾರರು. ಅವರ ಆತ್ಮ ನಮ್ಮನ್ನು ನಿಂದಿಸುವುದು.' ಇದು ಸರ್ದಾರ್ ಪಟೇಲರ ಧ್ವನಿಯಾಗಿತ್ತು. ದೇಶದ ಜನ ತಮಗೆ ಲಭಿಸಿದ ವಾಹನಗಳಲ್ಲಿ ದಿಲ್ಲಿ ಕಡೆಗೆ ಹೊರಟಿದ್ದರು. ರೈಲುಗಳು, ವಿಮಾನಗಳು, ಬಸ್‌ಗಳು, ಸ್ವಂತ ವಾಹನಗಳು ಎಲ್ಲವೂ ದಿಲ್ಲಿಯೆಡೆಗೆ ಮುಖ ಮಾಡಿದ್ದವು. ಇಂದು ಸಂಜೆ, ಅದಕ್ಕೂ ಮೊದಲು ಬಾಪೂ ಅವರ ನಶ್ವರ ದೇಹ ಪಂಚಭೂತಗಳಲ್ಲಿ ವಿಲೀನಗೊಳ್ಳುವುದಕ್ಕೂ ಮೊದಲು ಅವರ ಅಂತಿಮ ದರ್ಶನ ಪಡೆದು, ಅವರ ಮೃತ ದೇಹದ ಮೇಲೆ ಪುಷ್ಪಗಳನ್ನು ಅರ್ಪಿಸಲು ಬಯಸುತ್ತಿದ್ದ ಲಕ್ಷಾಂತರ ಜನ ಇದಕ್ಕಾಗಿಯೇ ದೇಶವಿದೇಶಗಳಿಂದ ದಿಲ್ಲಿಯ ಕಡೆಗೆ ಮುಖ ಮಾಡಿ ಬರುತ್ತಿದ್ದರು.

ಹನ್ನೊಂದೂವರೆಗೆ ಬಿಡಲಾ ಹೌಸಿಗೆ ಹೂಗಳಿಂದ ಮುಚ್ಚಿದ್ದ ಬಾಪೂ ಅವರ ಮೃತ ದೇಹವನ್ನು ಒಂದು ಪಲ್ಲಕ್ಕಿಯಲ್ಲಿ ಅಲಂಕರಿಸಿ ಹೊರಗೆ ತರಲಾಯಿತು. ಅಲ್ಲಿ ಈ ಮೊದಲೇ ಸಿದ್ಧವಾಗಿದ್ದ ಸೈನ್ಯದ ವಾಹನವೊಂದರಲ್ಲಿ ಆ ಸಿದಿಗೆಯನ್ನಿಡಲಾಯಿತು. ಆ ವಾಹನಕ್ಕೆ ಹಗ್ಗಗಳನ್ನು ಕಟ್ಟಲಾಗಿತ್ತು. ಸಿದಿಗೆಯನ್ನು ನಾಲ್ಕು ಹೆಗಲುಗಳ ಮೇಲೆ ಹೊರುವುದಕ್ಕೆ ಬದಲಾಗಿ ಸಾವಿರಾರು ಕೈಗಳು ಆ ಹಗ್ಗವನ್ನು ಎಳೆದು ಸ್ಮಶಾನದ ಕಡೆಗೆ ಹೋಗುತ್ತಿದ್ದವು, 'ಮಹಾತ್ಮಾ ಗಾಂಧಿ ಕೀ ಜೈ,' 'ಬಾಪೂ ಅಮರ್ ರಹೆ' ಘೋಷಣೆಗಳು ಮತ್ತು 'ರಘುಪತಿ ರಾಘವ ರಾಜಾ ರಾಮ್' ಭಜನೆಗಳು ಮೊಳಗುತ್ತಿದ್ದವು. ರಸ್ತೆಯ ಇಬ್ಬದಿಗಳಲ್ಲಿ ಒಂದೊಂದು ಇಂಚು ಜಾಗದಲ್ಲೂ ನಿಂತಿದ್ದ ಜನ ಕಣ್ಣೀರು ಸುರಿಸುತ್ತಿದ್ದರು. ಯಾರೂ, ಯಾರನ್ನೂ ಸಮಾಧಾನ ಪಡಿಸುವ ಸ್ಥಿತಿಯಲ್ಲಿರಲಿಲ್ಲ.

ಒಮ್ಮೆ ಕಾಲ್ನಡಿಗೆಯಲ್ಲಿ, ಇನ್ನೊಮ್ಮೆ ಸೈನ್ಯದ ವಾಹನಗಳಲ್ಲಿ ನಿಂತು ಹೋಗುತ್ತಿದ್ದ ದೇಶದ ಸರ್ವೋಚ್ಚ ನೇತಾರರು ಹಾಗೂ ಬಾಪೂ ಪರಿವಾರದ ಸದಸ್ಯರು ಮತ್ತು ಆಶ್ರಮವಾಸಿಗಳು, ಸ್ಮಶಾನಭೂಮಿವರೆಗಿನ ಐದೂವರೆ ಮೈಲಿ ದೀರ್ಘ ಮಾರ್ಗದಲ್ಲಿ ಸಾಗುತ್ತಿದ್ದರು. ಐದು ಗಂಟೆಗಳ ಕಾಲ ಮೆರವಣಿಗೆಯಲ್ಲಿ ಬಂದ ಆ ವಿಶಾಲ ಜನಸಮೂಹ ರಾಜಘಾಟ್‌ಗೆ ಬಂದಿತ್ತು. ಆಗ ಬಾಪೂ ಅವರು ತಮ್ಮ ನಶ್ವರ ಶರೀರವನ್ನು ತ್ಯಜಿಸಿ ಸುಮಾರು ಇಪ್ಪತ್ತನಾಲ್ಕು ಗಂಟೆಗಳು ಕಳೆದಿದ್ದವು. ಬಾಪೂ ಅವರ ಇಬ್ಬರು ಮಕ್ಕಳಾದ ದೇವದಾಸ ಮತ್ತು ರಾಮದಾಸ ಇಬ್ಬರೂ ಬಾಪೂ ಅವರ ಶವದ ಬಳಿಯೇ ನಿಂತಿದ್ದರು. ಮಣಿಲಾಲ ಅನೇಕ ವರ್ಷಗಳಿಂದ ಆಫ್ರಿಕಾದಲ್ಲಿಯೇ ನೆಲೆಸಿದ್ದ. ಬಾಪೂ ಅವರ ಶವಸಂಸ್ಕಾರವನ್ನು ಮಾಡಬೇಕಿದ್ದ ಅವರ ಜ್ಯೇಷ್ಠ ಪುತ್ರ ಹರಿಲಾಲ ಎಲ್ಲಿಯೂ ಕಾಣ ಬರುತ್ತಿರಲಿಲ್ಲ.



ರಾಜಘಾಟದಲ್ಲಿ ಮೂರು ಅಡಿ ಎತ್ತರದ, ನಾಲ್ಕು ಅಡಿ ಉದ್ದದ ಹಾಗೂ ಹನ್ನೆರಡು ಅಡಿ ಅಗಲದ ಗಂಧದ ಚಿತೆಯನ್ನು ರಾತ್ರೋರಾತ್ರಿ ಸಿದ್ಧಪಡಿಸಲಾಗಿತ್ತು. ಆ ವೇದಿಕೆಯನ್ನು ಸೈನಿಕರು ಸುತ್ತುವರೆದು ನಿಂತಿದ್ದರು. ಬಾಪೂ ಅವರ ಶವವನ್ನು ಆ ಚಿತೆಯ ಸಮೀಪಕ್ಕೆ ತಂದಾಗ, ಸೈನ್ಯದ ಆವರಣವು ಜನರ ನೂಕುನುಗ್ಗಲಿನಿಂದ ಚದುರಿತು. ಬಿಕ್ಕಳಿಸುತ್ತಿದ್ದ ಜವಾಹರಲಾಲ್ ನೆಹರೂ, ಸರ್ದಾರ್ ಪಟೇಲ್ ಮತ್ತು ರಾಜೇಂದ್ರ ಪ್ರಸಾದರಂಥ ಘಟಾನುಘಟಿ ಮುಖಂಡರೊಂದಿಗೆ ಲಾರ್ಡ್ ಮೌಂಟ್‌ಬೆಟನ್ ಸಹ ತಮ್ಮತಮ್ಮ ಜಾಗವನ್ನು ಬಿಟ್ಟು ಚಿತೆಯ ಸಮೀಪಕ್ಕೆ ಬರುತ್ತಿರುವ ಜನಸಮೂಹಕ್ಕೆ ಕೈ ಮುಗಿದು ತಡೆಯಲು ಪ್ರಯತ್ನಿಸುತ್ತಿದ್ದರು. ಶವದ ಸಮೀಪದಲ್ಲಿ ಪರಸ್ಪರರ ಆಸರೆಯಲ್ಲಿ ನಿಂತಿದ್ದ ಬಾಪೂ ಅವರ ಪರಿವಾರದ ಸದಸ್ಯರು, ಬಾಪೂ ಅವರ ಅಂತಿಮ ದರ್ಶನವನ್ನು ಪಡೆಯುತ್ತಿದ್ದರು.

ಬಾಪೂ ಅವರ ಅಂತಿಮ ದರ್ಶನಕ್ಕಾಗಿ ನಿಂತ ಜನರಲ್ಲಿ ಕೇಶವಲಾಲ್ ಗಾಂಧಿ ಸಹ ಇದ್ದರು. ಕೇಶವಲಾಲರ ಕಣ್ಣುಗಳೆದುರು ಟಾಲ್‌ಸ್ಟಾಯ್ ಫಾರ್ಮ್ ಮತ್ತು ಫೀನಿಕ್ಸ್ ಆಶ್ರಮದ ಬಾಪೂ ಅವರ ಛವಿ ಮೂಡಿತು. ಕೇಶವಲಾಲರು ಅಂದಿನಿಂದಲೂ ಬಾಪೂ ಅವರನ್ನು ನೋಡುತ್ತಿದ್ದರು...ಕಟನಿ ಸ್ಟೇಷನ್‌ನಲ್ಲಿ ಬಾ ಅವರಿಗೆ ಮೋಸುಂಬೆಯನ್ನು ಕೊಡುತ್ತಿದ್ದ ಹರಿಲಾಲನನ್ನೂ ಸಹ ಕೇಶವಲಾಲರು ನೋಡಿದ್ದರು.

ಅಕಸ್ಮಾತ್ ಕೇಶವಲಾಲರ ದೃಷ್ಟಿ, ಬಾಪೂ ಅವರ ಶವದ ಮೇಲೆ ಹೂಗಳನ್ನು ಮಳೆಗರೆಯುತ್ತಾ ಅವರ ಅಂತಿಮ ದರ್ಶನ ಪಡೆಯಲು ಕಾತುರರಾಗಿದ್ದ ಗುಂಪನ್ನು ನೋಡಿತು. ಆ ಗುಂಪಿನ ಮಧ್ಯದಲ್ಲಿ ಸಿಲುಕಿಕೊಂಡು ಅರಚುತ್ತಾ, ಹೇಗೋ ಬಹು ಕಷ್ಟದಿಂದ ನಿಲ್ಲುತ್ತಿದ್ದ ವೃದ್ಧರೊಬ್ಬರ ಆಕೃತಿಯನ್ನು ತಾವು ಎಲ್ಲೋ ನೋಡಿದಂತಿದೆ ಎಂದು ಕೇಶವಲಾಲರಿಗೆ ಅನ್ನಿಸಿತು. ಆ ವೃದ್ಧ ಗಾಬರಿಯಿಂದ ಎರಡು ಹೆಜ್ಜೆ ಮುಂದೆ ಬಂದು ಮತ್ತೆ ನೋಡಿದ. ಕಣ್ಣೀರಿನಿಂದಾಗಿ ತನಗೆ ಭ್ರಮೆಯಾಗಿಲ್ಲ ತಾನೇ ಎಂದು ಯೋಚಿಸಿ ಅವನು ತನ್ನ ಕಣ್ಣುಗಳನ್ನು ಒರೆಸಿಕೊಂಡ. ಇಲ್ಲ ಇಲ್ಲ, ಕೇಶವಲಾಲರಿಗೆ ಭ್ರಮೆಯಾಗಿರಲಿಲ್ಲ. ಅದೇ ನಿಲುವು...ಅದೇ ಮುಖ...ಅದೇ ವ್ಯಥೆ... ಅದೇ ವ್ಯಾಕುಲತೆ...ಎಲ್ಲವೂ ಹಾಗೆಯೇ ಇತ್ತು... ಖಂಡಿತ...ಅವನು ಹರಿಲಾಲನೇ ಆಗಿದ್ದ. ಹರಿಲಾಲ ಬಾಪೂ ಅವರ ಅಂತಿಮ ದರ್ಶನ ಪಡೆದು ಅವರ ಚರಣಗಳಲ್ಲಿ ತನ್ನ ಪುಷ್ಪವನ್ನು ಅರ್ಪಣೆ ಮಾಡಲು ಗುಂಪಿನೊಂದಿಗೆ ಸೆಣಸಾಡಿ ಬರುತ್ತಿದ್ದ.